# ವಿಎಲ್‌ಎಸ್‌ಐ ತಂತ್ರಾಂಶ ಕಾರ್ಯಾಗಾರ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗವು ಕ್ಯಾಡನ್ಸ್ ತಂತ್ರಾಂಶ ಬಳಸಿ ವಿ ಎಲ್ ಎಸ್ ಐ ವಿನ್ಯಾಸ ಕುರಿತಾದ ಎರಡು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಬೆಂಗಳೂರಿನ ಎಂತುಪ್ಲೆ ಟೆಕ್ನಾಲಜಿಸ್‌ನ ಪುಲಿವರ್ತಿ ರಾಜೇಂದ್ರ ಮಾತನಾಡಿ, ಬಹುಪಯೋಗಿ ವಿಎಲ್ ಎಸ್ ಐ ತಂತ್ರಜ್ಞಾನ ಆದರಿಸಿ ಕಂಪನಿಗಳು ವಿಪುಲ ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತಿದೆ ಎಂದರು. ಕ್ಯಾಡೆನ್ಸ್ ತಂತ್ರಾಂಶದ ಮೂಲಕ ವಿಎಲ್‌ಎಸ್ ತಂತ್ರಜ್ಞಾನದ ವಿನ್ಯಾಸ ಕುರಿತಾಗಿ ಪ್ರಾಯೋಗಿಕವಾಗಿ ವಿವರಿಸಿದರು. ಇನ್ವರ್ಟರ್ ವಿನ್ಯಾಸ, ಡಿಜಿಟಲ್ ಗೇಟ್ ಗಳ ಕಾರ್ಯಕ್ಷಮತೆ ಪರೀಕ್ಷೆ ಇವುಗಳ ಕುರಿತು ಬೆಳಕು ಚೆಲ್ಲಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ವಿಎಲ್‌ಎಸ್‌ಐ ಕ್ಷೇತ್ರ ದಲ್ಲಿ ನೂತನ ತಂತ್ರಜ್ಞಾನದ ಕುರಿತಾಗಿ ಹೆಚ್ಚಿನ ಮಾಹಿತಿ ಹೊಂದಲು ಈ ಕಾರ್ಯಗಾರವನ್ನು ಆಯೋಜಿಸಲಾಗಿದೆ ಎಂದರು.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಸಭಿಕರನ್ನು ಸ್ವಾಗತಿಸಿದರು. ಪ್ರೊ. ದೀಪಕ್ ಶರ್ಮ ಹಾಗೂ ಪ್ರೊ. ರಾಹುಲ್ ಸಿಎಂ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ವಿಎಲ್ ಎಸ್ ಐ ತಂತ್ರಾಂಶದ ಈ ಕಾರ್ಯಗಾರದಲ್ಲಿ ಕೊಲ್ಲಾಪುರ, ಗೋವಾ, ಸೇರಿದಂತೆ ವಿವಿಧ ಕಾಲೇಜಿನ 30ಕ್ಕೂ ಅಧಿಕ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

